# ಯಾಕೆ ನಿರ್ದಯನಾದೆ ಎಲೊ ದೇವನೆ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 85.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 215.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 476.
4. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 274.
5. **Note:** Lyrics given here are as per Ref. 1. The wordings in Ref. 2 are same as in Ref. 1. The wordings in Ref. 3 & Ref. 4 are same and are slightly different, which are given in yellow highlights).
6. **Note:** Singer has followed lyrics as in Ref. 3 (yellow highlights).

ರಾಗ: ಕಾನಡಾ ತಾಳ: ಅಟ

ಏಕೆ ನಿರ್ದಯನಾದೆ ಎಲೋ ದೇವನೇ
ಶ್ರೀಕಾಂತ ಎನ್ನ ಮೇಲೆ ಎಳ್ಳಷ್ಟು ದಯವಿಲ್ಲ || ಪ ||

ಕಂಗೆಟ್ಟು ಕಂಬವನು ಒಡೆದು ಬಯಲಿಗೆ ಬಂದು (ಕಂಗೆಟ್ಟು ಕಂಬದಲಿ ಒಡೆದು ಬಳಲಿ ಬಂದು)
ಹಿಂಗದೆ ಪ್ರಹ್ಲಾದನಪ್ಪಿಕೊಂಡೆ
ಮಂಗಳ ಪದವಿತ್ತು ಮನ್ನಿಸಿದೆ ಅವ ನಿನಗೆ
ಬಂಗಾರವೆಷ್ಟು ಕೊಟ್ಟನು ಹೇಳೋ ಹರಿಯೇ || ೧ ||

ಸಿರಿಗೆ ಪೇಳದೆ ಮುನ್ನ ಸೆರಗ ಸಂವರಿಸದೆ
ಗರುಡನ ಮೇಲೆ ಗಮನವಾಗದೆ
ಭರದಿಂದ ನೀ ಬಂದು ಕರಿಯನುದ್ಧರಿಸಿದೆ
ಕರಿರಾಜನೇನು ಕೊಟ್ಟನು ಹೇಳು ಹರಿಯೇ || ೨ || (ಕರಿರಾಜ ಎಷ್ಟು ಕನಕವ ಕೊಟ್ಟ ಹರಿಯೇ)

ಅಜಮಿಳನು ಅಣ್ಣನೆ ವಿಭೀಷಣನು ತಮ್ಮನೆ
ನಿಜದಿ ರುಕ್ಮಾಂಗದ ಮೊಮ್ಮಗನೆ
ಭಜನೆಗೈವರೆ ಹಿತರೆ ನಾ ನಿನಗನ್ಯನೆ
ತ್ರಿಜಗಪತಿ ಸಲಹೆನ್ನ ಪುರಂದರ ವಿಠಲ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇದು ನಿಂದಾಸ್ತುತಿಯ ಪ್ರಕಾರಕ್ಕೆ ಸೇರಿದ ಪದ. ಮೊದಲ ನುಡಿಯಲ್ಲಿ ಪ್ರಹ್ಲಾದನ ಕತೆ; ಎರಡನೆಯದರಲ್ಲಿ ಗಜೇಂದ್ರಮೋಕ್ಷದ ಪ್ರಸಂಗ; ಮೂರನೆಯದರಲ್ಲಿ ಅಜಾಮಿಳ, ವಿಭೀಷಣ, ರುಕ್ಮಾಂಗದರನ್ನು ಹರಿಯು ಸಲಹಿದುದು. ಈ ಭಕ್ತರಿಗೆ ಒಲಿದವನು ತನಗೇಕೆ ಒಲಿಯುವುದಿಲ್ಲ? ಈ ಭಕ್ತರು ಲಂಚವನ್ನೇನಾದರರು ಕೊಟ್ಟರೋ? ಅಥವಾ ಅವರು ಹತ್ತಿರದ ನೆಂಟರೋ? ಪಕ್ಷಪಾತ ಬುದ್ಧಿಗೆ ಕಾರಣವೇನು? ಅವರು ಬೇಕಾದವರು, ನಾನು ಬೇಡವಾದವನು ಆದುದು ಹೇಗೆ?

**ಸೆರಗು ಸಂವರಿಸದೆ** – ಉಟ್ಟ ಬಟ್ಟೆಯನ್ನೂ ಸರಿಪಡಿಸಿಕೊಳ್ಳದೆ.

**ಕರಿಯನು** – ಆನೆಯನ್ನು (ಇಂದ್ರದ್ಯುಮ್ನನು ಶಾಪದಿಂದ ಆನೆಯಾಗಿದ್ದಾಗ).

**ಕಂಗೆಟ್ಟು ......... ಪ್ರಹ್ಲಾದನಪ್ಪಿಕೊಂಡೆ** = ನರಸಿಂಹಾವತಾರ

**ಗಮನವಾಗು** = ಏರಿಹೋಗು

**ಐವರು** = ಪ್ರಹಲ್ಲಾದ, ಕರಿರಾಜ, ಅಜಾಮಿಳ, ವಿಭೀಷಣ, ರುಕ್ಮಾಂಗದ

**ಭಜನೆ** = ನಾಮಸ್ಮರಣೆ ಮಾಡಲಿಕ್ಕೆ

**ಹಿತರೆ** = ಇಷ್ಟವಾದರೆ

**Classification:** Keerthane
**Ankita:** purandara vittala
**Location:** NA
**Category:** Vishnu Stuti, Hari Sarvottama, pooja tatva
**Sub-Category:** daya, deva, Narasimha, prahallada, ajamila, gaja, Vibhishana, rukmangada, mangala, bangara, Krishna, Lakshmi, Vishnu, garuda, loka, hari sarvottama
**Pravachana:** NA
**Explanation:** NA